# ಶಾಸನಗಳಲ್ಲಿ ಕತ್ತಲೆಕುಲ

೧೦ .ಕನ್ನಡ ಶಾಸನಗಳಲ್ಲಿ ಚಾಳುಕ್ಯ.ಕದಂಬಕುಲ ,ಚೋಲಕುಲ, ಹೊಯ್ಸಳ, ಗಂಗವಂಶ ರಾಷ್ಟ್ರಕೂಟ ಇಂಥ ದೊಡ್ಡ ರಾಜವಂಶಗಳಲ್ಲದೆ ಸಗರ ಮಣಲೆರಕುಲ, ಸಾದಕುಲ, ವ್ಯಾರ್ಯುಭಿಶ್ಯಕುಲ, ಮೋರಕಕುಲ, ವಜಿಕುಲ, ಖಚರಕುಲ, ಚತುರ್ಥಕುಲ–ಮೊದಲಾದ ಚಿಕ್ಕಪುಟ್ಟ ಮನೆತನಗಳ ವಿರರೋಲ್ಲೆಖಗಳೂ. ಸಿಗುತ್ತವೆ. ಈ ಬಗೆಯ ಚಿಕ್ಕಪುಟ್ಟ ಕುಲಗಲಲ್ಲಿ ಕತ್ತಲೆಯ ಕುಲವೂ ಒಂದು ಈ ಕತ್ತಲೆ ಕುಲವು ಇದುವರೆಗೆ ಎಲ್ಲಿಯೊ ಪ್ರಸ್ತಾಪಿತವಾಗಿಲ್ಲ, ಚರ್ಚೆಗೆ ಒಳಗಾಗಿಲ್ಲ. ಜಲದಮರೆಯ ನಿದಾದಂತ್ತೆ ಕತ್ತಲೆಕುಲದ ಇತಿಹಾಸ ಶಾಸನ ನಿಕ್ಷಪ್ರದಲ್ಲಿ ಅಡಗಿ ಕುಳಿತಿದೆ. ನಾಲ್ಕೈದು ಪ್ರಮುಖ ಶಾಸನಗಳನ್ನು ಆದರಿಸಿ ಕತ್ತಲೆಕುಲದ ಇತಿಹಾಸ ಶಾಸನಗಳನ್ನು ಆಧರಿಸಿ ಕತ್ತಲೆಕುಲದ ವಿಚಾರವಾಗಿ ಕೆಲವು ಚಾರಿತ್ರಿಕ ಮಾಹಿತಿತಗಳನ್ನು ಪೂರೆಸುವುದು ಈ ಹಂಪ್ರಬಂದದ ಉದ್ದೇಶ.

೧.೧ ಕತ್ತಲೆಕಿಲದ ಕರುಳ ಬಳಿ ಇನೂರುವರ್ಷಗಳ ಉದ್ದಗಲಗಳಲ್ಲಿ ಹರಡಿಕೊಂಡಿ ತ್ತೆಂದು ಸಾಬಿತು ಪಡಿಸಲು ಶಾಸನಗಳ ಸಮುಗ್ರಿ ದೊರೆಯುತ್ತದೆ:

೧. ಎ.ಇ.೧೫,೨೩. ೧೦೭೧–೭೨ ಗಾವರವಡ –ಅಣ್ಣಗೆಱ (ಧಾಜಿ/ಗದಗ ತಾ) ಪು.೩೩೭–೪೮

೨. ಸೌ,ಇ.ಇ .೧೫ ೨೧೪ .೧೧೯೯. ಗದಗ

೩. ಎ. ಇ. ೧೫ ,೩೪೧.೦೧೦೭೨

೪. ಸೌ. ಇ.ಇ.೧೫ ೬೩೭. ಸು .೧೨–೧೩ ಶ. ಜಾವೂರು (ದಾ ಜಿ/ ನವಲಗುಂದ ತಾ) ಪು.೪೦೮

೫. ಸೌ.ಇ.ಇ .೧೧–೧ ,೪೫. ೯೮೦.ಕುರುಹಟ್ಟಿ (ಧಾ ಜಿ/ನವಲಗುಂದ ತಾ) ಪು೩೦–೩೨

೨. 'ಕತ್ತಲೆ ಕುಲದ ಮೊದಲ ಹಾಗೂ ಮೂಲ ರೂಪ 'ಕಱಲೆ' ಕುಲ, ಅದರ ತರುವಾಯದ 'ಕರ್ತ್ತಲೆ'ಕುಲ, ಅದರ ಬೆಲವಣಿಗೆಯ ಕಡೆಯ ರೂಪ 'ಕತ್ತಲೆ' ಕುಲ.ಕಱ್ಱಲೆ-ಕತ್ತಲೆ ಎಂಬ ಮೂರೂ ರೂಪಗಲು ಮತ್ತು ಫ್ರಾಯೋಗಗಳು ಅವರ ವಾಂಶಿಕ ವಿವರಗಳೆನೂಳಗೊಂಡಮೇಲಕ್ಕಿಂಡ ಶಾಸನಗಳಲ್ಲಿಯೆ ಸಿಗುತ್ತವೆ.

೩. ಕತ್ತಲೆ ಕುಲದ ಸಂಬದವಾಗಿ ಮೊದಲ ಮಾಹಿತಗಲನ್ನಿ ಒದಗಿಸುವ ಫ್ರಾಚೀನ ಶಾಸನವೆಂದರೆ ಕುರಹಟ್ಟಿ (ಕಾರನಗುರಿಪಟ್ಟಿ)ಯ ಶಾಸನ ಈ ಶಾಸನದಲ್ಲಿ [ಸೌ. ಇ.ಇ ೧೧-೧, ೪೫.೯೮೦] ರೇವನ್ನ ,ಕೆಂಚ ಸಿರಿ ಮುದ್ದ, ಪಿರಿಯಕೋಟ್ಟಿಗ ಗಾವುಣ್ಡ, ಪಿರಿಯ ಆಯ್ಚ, ತೊಣ್ಡ ಮತ್ತು ಕಾಳಿಧುರಂದರ ಎಂಬುವರನ್ನು ಪರಿಚಯಿಸುವ ಎಂಟು ಕಂದ ಪದ್ಯಗ ಳೂ ಒಂದು ತ್ರುಟಿತವೃತ್ತವೂ ಇದೆ ವ್ಯಾಖ್ಯಾನ ನಿರಪೇಕ್ಷವೂ ಸ್ವಯಂ ಪ್ರಕಾಶವೂ ಆದ ಆಕಂದ ಪದ್ಯಗಳನ್ನು ನೇರವಾಗಿ, ಯಥಾವತ್ತಾಗಿ ಉದಾಹರಿಸಿದೆ; ಕತ್ತಲೆ ಕುಲ ವರಿಷರ ವಂಶಾವಳಿ ಸೌ.ಇ.ಇ ೧೧-೧ .೪೫.೯೮೦ .ಕುರುಹಟ್ಟ (ಧಾಜಿ/ ನವಲುಂದ)

ಶ್ರೀಮದ್ರವಿಜಸುರದುರು
ದಾಮಂ ರೇವನ್ನ ನಾತನನ್ವಯದೊಳ್ಸಂ
ಗ್ರಾಮಜಯಿ ಕೆಂಚನೊಬೋನಿ
ಳಾ ಮಹಿತಂ ವೀರನರ್ಕ್ಕಸುತನಿನುದಾರ [೦] ॥ (ಸಾಲು ;೧-೨)

ಪಿಡಿದಡಸಿ ನವಿಲಕೊನ್ದಡಿ
ಗಿ[ಡೆ] ತಳಿಕ್ಕಿ ಬೇಡೆ ವಡೆಯಂ ಬಲ್ಲಾ
ಳಡೆದಂ ಬೆಲ್ವಲಮಂ ನೋ
ಳ[ಡೆ] ಮುನ್ನಂ ಬಳಿಕ್ಕೆ ನೆಲೆ ನವಿಗ್ಗುಂದಪುರಂ ॥ [೨-೪]

ಮೇರ್ತ್ಯಲೆಯೆನಿಸಿದೊಂ ಕಲಿ

ತೊಱಳಿದುಳಿದಿಕ್ಕೆ ಪರೆಯ ಭಾನೂದಯದೊ

ಳ್ಕತ್ರ್ತಲೆಯನ್ನಿರ ರಿಪುಗ

ಳ್ಕತ್ರ್ತಲೆ ವೆಸರಾದುದಾತನೊಕ್ಕಲ್ವೆಸರುಂ ॥ [೪–೬]

ಸಿರಿಮುದ್ದನೆಂಬನಾತನ

ಪಿರಿಯ ಮಗಂ ನೆಗಱ್ದಿನತನು ಭುಜವಿಕ್ರಮನೇ

ದೊರೆಯರ ಮಾತನಭುಜಬಲ

ದೊರೆಗೆ ವರಲೆಱಯರೇಂ ಘ್ರಾತಾಪಿಯೋ ಮುದ್ದಂ ॥ [೬–೮]

ಅವರನ್ವಯ ತೀಳಕಂ ಲೋ

ಕವಿಶ್ರುತಂ ಪಿರಿಯ[ಕೋ] ಏ ಗಾವುಣ್ಡಂ ಸಂ

ಭವಿಸಿದನಾತನ ಮಾಡಿದ

ಶಿವಗೃಹ ಮು[ಂಜೌ] ನ ಸಾಲೆಯುಂ ಭೂವಿದಿತ(ಂ) ॥ [೮–೧೦]

ನಯಮಂ ಮೆಱೀವಂ ತತ್ಸುತ

ನಯಾನಾಯಂ ಪರೆನೆನಿಸಿ ನೆಗಱ ಪಿರಿಯಾಯ್ಚನನಾ

ಶ್ರಯಣೇಯನಾದನಾದನಾ ಕ್ಷ

ತ್ರಿಯಾದಿಗಂ ಸಕಲ ಸಮಯಿ [ಗಂ ಬು ] ದ ಜನಕಂ ॥ [೧೦–೧೨]

ಚಣ್ಡ ಬುಜವಿಕ್ರಮಂ ಭೂ

ʻಮಣ್ಡಲ ವಿಖ್ಯಾತನಾತನಿಂ ಬಳಿಕಂ ಗಾ

ವುಣ್ಡಗೆ ನಿನ್ದನಾಹವಂ

ಶೌಣ್ಡಂ ತೊಣ್ಡಂ ತದನ್ವವಾಯನಜೆಯಂ ॥ [೧೨-೧೩]

ಪಿರಿಯುಮಗಂ ಕಾಳಿಧುರಂ

ಧರನಾತಂ ತೊಣಗಂಗೆ ಮೆಚಿವಿಸಿದೋಂ

ನ್ನರದೇವನ ನಾಡೊಡೆಯ

ರ್ಪ್ಪರಿಣತರಾರ್ಕ್ಕನ್ನು ಕ[ಕ್ಕೆ] ರೇವನ್ನನನೆಂ ॥ [೧೩-೧೪]

.. ... .. ಬೆಳಗು ನೆಳೆಯೋಲ -ಭೆಲ್ವಲಾದಿತ್ಯದೇವಂ ॥

ಕ್ರಿ. ಶ, ೯೮೦ ರಲ್ಲಿದ್ದ (ತೊಂಡನ ಹಿರಿಯಮಗ ) ಕಾಳಿದುರಂಧರನು ತನ್ನ ರಣಸಾಹಸದಿಂದ ರಾಷ್ಟಕೂಟರ ಮುಮ್ಮಡಿಕೃಷ್ಣ (೯೪೯-೬೭) ಚಕ್ರವರ್ತಿಯನ್ನು ಸಹ ಮೆಚ್ಚಿಸಿದ್ದನು. ಈತನ ಹೆಸರು ಕಾಳಿ(ಗ) ಎಂದು ಮಾತ್ರ ಇದ್ದು ,(ಕಾಳಿ) ದುರಂಧರ ಎಂಬುದು ಬಿರುದಾಗಿರುವ ಸಾದ್ಯತೆಯಿದೆ.

೪. ಈ ಕತ್ತಲೆ ವಂಶದ ಮೂಲ ಪುರುಷ ರೇವನ್ನ. ಈತನು ಕರ್ಣನಂತೆ ಶ್ರೇಷ ಮನೆಯವನಾಗಿದ್ದುನು (ರವಿಜ ಸುರತ ಬದಲು ದಿವಿಜಸುರತೆ ಎಂದೂ ಪಾಠವಿದ್ದಿರಬಹುದು ) .ಇವರ ವಂಶದಲ್ಲಿ ರೇವನ್ನ ನಾದಮೇಲೆ ,ಕೆಂಚನ -ಎಂಬೋನ (ಪೂರ್ವದ ಹಳೆಗನ್ನಡ ಭಾಷಾಪ್ರಯೋಗ ) ಉದಾರ ಚರಿತ ಹಾಗೂ ಪರಾಕ್ರಮಿ ಹುಟ್ಟಿದನು. ಈ ಕೆಂಚನು ನವಿಲುಗಳನ್ನು ಕೊಲ್ಲುತ್ತಿದ್ದ ಬೇಡರ ಪಡೆಯನ್ನು ಹತ್ತಿಕ್ಕಿ ಬೆಳ್ವಲವನ್ನು ಪಡೆದನು ,ಅಲ್ಲಿಂದ ಮುಂದೆ 'ನವಿಲುಗುಂದ ಪುರ 'ವು ಈಕತ್ತಲೆ ವಂಶದವರ ನೆಲೆವೀಡಾಯಿತು. ಕೆಂಚನ ದೊಡ್ಡಮಗ ಸಿರಿಮುದ್ದಾನಾದ ಮೇಲೆ ಅವರ ಅನ್ವಯದಾಲ್ಲಿ ತಿಳಕದಂತೆ ಬಂದವನು ಹಿರಿಯ ಕೋಟಿಗಾವುಣ್ಡ, ಆಮೇಲೆ ಹಿರಿಯಾಅಯ್ಯೊನೂ ತೊಣ್ಡನೂ ತರುವಾಯ ಕಾಳಿಧುರಧುರನೂ ಮಿಂಚಿದರು. ಕಾಳಿಧುರಧುರನು ರಟ್ಟನ ಮಮ್ಮಡಿ ಕೃಷ್ಣನ ಅಚ್ಚುಮೆಚಿವಿನಕದನ ಕಲಿಯಾಗಿದ್ದನು.

ಸಾಲು : ೪೪ ಸ್ವಸ್ತಿ ಸಮಧಿಗತ ಪಂಚ ಮಹಾಶಬ್ದ ಮಹಾಸಾಮನ್ತ ಭುಜಭಳೋಪಾರ್ಜಿತ ವಿಜಯಲಕ್ಷ್ಮಿ ಕಾಂತಂ ಸಮಸ್ತಾರಿ ವಿಜಯ।

೪೫ ದಕ್ಷ ದಕ್ಷಿಣ ದೋರ್ದ್ದಣ್ಡಂ ಕತ್ತಲೆ ಕುಲಕಮಳ ಮಾರ್ತ್ತಣ್ಡಂ

ಮರ್ಯೋರಾವತೀ ಪುರವರಾದೀಶ್ವರಂ ಜ್ವಾಲಿನೀಲಬ್ದವರ ಪ್ರಸಾದ ಕ

೪೬ ಪೂರ್ಣರವರ್ಷಂ ಜಿನಧರ್ಮ್ಮಂ ನಿಮ್ಮ ೯೪ಂ ನೆಱ ಕಾಟಿಯಂಕಕಾಱ

ನಾಮದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ಮಹಾಸಾಮನ್ತಂಬೆ

೪೭ ಳ್ವಲಾಧಿಪತಿ ಭುಜಬಳ ಕಾಟರಸರು

ಜಗಮಲ್ಲ ದೇಸೆಗೆ ಕ

ಯುಗಿಗೆಮ ಕೊಟ್ಟಱಯನೋನ್ದು ಕಾಗಿಣಯುಮನಾ

ಗಗನದೊಳಿರ್ಪಾದಿತ್ಯಂ

ಬಗೆದುದನಿತ್ತಪನೆ ಬೆಳ್ವಲಾದಿತ್ಯನ ವೂಲು ॥

೪೮ ಇನ್ನೆನಿಸಿದ ಬೆಳ್ವಲಾದಿತ್ಯಂ ಶಕವರ್ಷ ೯೪೪ ನೆ

೪೯ ಯಪರಿದಾವಿ ಸಂವತ್ಸರದ ಪುಷ್ಯ ಶುದ್ಧಾ ಪಂಚಮಿ ಬ್ರಿಹಸತಿ ವಾರದಂದಣ ಗೆಱಯ ಗಂಗ ಪೆರ್ಮಾಡಿಯ ಬಸ

೫೦ ದಿಯ ದಾನ ಸಾಲೆಗಲ್ಲಿಗಾಳ್ವ ಗಾವರಿವಾಡದ ತಮ್ಮ ಸಿವಟದ ಮತ್ತರ ಯ್ವತ್ತುಮನ – ಅಣ್ಣಗೆತಿಱಯೊಳು ಕ್ರಯ ವಿಕ್ರಯ

೫೧ ದಿಂಯಲ್ಲಿಯಾಚಾರ್ಯ್‌ರು ತ್ರಿಭುವನಚಂದ್ರ ಪಂಡಿತರ ಕಾಲಂ ಕರ್ಚ್ಚಿ ಧಾರಾಪೂರ್ವ್ವಕಂ ಮಾಡಿ ಭಿಟ್ಟುಕೊಟ್ಟರು ।

೬. ಗಾವರವಡ ಶಾಸನ ಒಂದು ದೊಡ್ಡ ಶಾಸನ .ಅದರ ಆದಿಯಲೂ, ಅಂತ್ಯದಲೂ ಇನ್ನಷ್ಟು ಪೂರಕ ಸಾಮುಗ್ರಿಯುಂಟು. ಆದರೆ ಮುಖ್ಯವಾಗಿ ಮತ್ತು ನೇರಾವಾಗಿ, ಕತ್ತೆಲೆ ಕುಲದ ಬೆಲ್ವಲಾಧಿಪತಿ ಕಾಟರಸನಿಗೆ ಸಂಬಂಧಿಸಿದ ಪಂಸ್ತಿ ಗಳನ್ನಷ್ಟ ಉದ್ಧೃತಗೂಳಿಸಿದೆ. ಭೆಳ್ವಾಲಾದೀತ್ಯ ಎಂದೆನಿಸಿದ ಮಹಾಸಾಮನ್ತ ಕಾಟರಸನಿಗೆ ಪಂಚಮಹಾಶಬ್ದಗಳ ಗೌರವನಿತ್ತು.ಈತನು ಕ್ರಿ. ಶ. ೧೦೭೧-೭೨ ರಲ್ಲಿ ಅಣ್ಣಿಗೆಱಿಯಲ್ಲಿದ್ದ ಪ್ರಸಿದ್ದ 'ಗಂಗ - ಪೆರ್ಮಾಡಿಯ ಬಸದಿ 'ಗೆ ೫೦ ಮತ್ತರು ಬೋಒಮಿಯನ್ನು ಅಲ್ಲಿಯ ಆಚಾರ್ಯ ತ್ರಿಭುವನ ಚಂದ್ರಪಂಡಿತರಿಗೆ ಕಾಅಲುತೊಳೆದು ದಾರಾ ಪೂರ್ವಕವಾಗಿ ಬಿಟ್ಟುಕೊಟ್ಟನು. ಈ ಬಸದಿಯನ್ನು ಕ್ರಿ.ಶ. ೯೭೧ ರಲ್ಲಿ ಗಂಗರ ಈಮ್ಮಡಿ ಬೂತುಗನು ಕಟ್ಟಿಸಿದ್ದನು.

೭ ಹೆನೊಂದನೆಯ ಶತಮಾನದ ಇತ್ತ್ರಾರಾರ್ಧದಿಂದ ಮುಂದಕ್ಕೆ ಈಕತ್ತಲೆ ಕುಲವಲ್ಲರಿಯ ಮುರುಟದೆ ಮತ್ತೆ ಹೇಗೆ ದಾಂಗುಡಿಯಿಟ್ಟಿತೆಂಬುದಕ್ಕೆ ತಕ್ಕೆ ಆಧಾರಗಳನ್ನು ಮತೊಂದು ಶಾಸನ ಪೊರೆಸುತ್ತದೆ [ಸೌ. ಇ.ಇ. ೧೫ ೨೧೪ .೧೧೯೯. ಗದಗ ಪು.೨೫೬-೫೮] ಈಶಾಸನವು ಜೈನವಂಶವರಾದ ಕತ್ತಲೆ ಕುಲದವರ ಧರ್ಮಸಮನ್ವಯ ದೋರಣೆಗೆ ಕನ್ನಡಿ ಹಿಡಿದಿದೆ .ಹೊಯ್ಸಳರ ಇಮ್ಮಾಡಿ ವೀರ ಬಲ್ಲಾಳ ದೇವನ (೧೧೭೩-೧೨೨೦) ವೀರ ಪ್ರಧಾನನಾದ ಮಹಾಮಂಡಳೇಶ್ವರ ರಾಯದೇವರಸನು,ತಾನು ಜೈನನಾದರೂ, ಶೃವಧರ್ಮದ ಗುರುಗಳಿಗೆ ತೋರಿದ ಭಕ್ತಿಗೌರವಗಳು ಶಾಘನೀಯವಾಗಿರು ವಂತೆಯೇ ಅನುಕರಣ ಯೋಗವಾಗಿದೆ.

೭.೧.೧ ರಾಯದೇವರಸನ ಶಾಸನಗಳಲ್ಲಿ ಆತನ ಕತ್ತಲೆ ಕುಲದಲ್ಲಿ ಆಗಿಹೋದ ಹಿರಿಯರ ಪರಿಚಯನ್ನು ಸಾಕಷ್ಟು ಕಾವ್ಯಮಯವಾಗಿಯೂ, ವಿಸ್ತಾರವಾಗಿಯೂ ನಿರೂಪಿಸಿದೆ; ನೇತೋತಳನೂ ಅಮಳ ಚರಿತ್ರನೂ ಆದ ರಾಯದೇವ ವಿಭು ತದ್ವಂ ಶಾವತಾರಮಂತೆಂದೊಡೆ

.. .. .. ಸಮ
ಗೋಮಹಿಷೀದನಧಾನ್ಯಯು
ತಾಮರಪುರವಿಂತಿದೆನೆ ಜನಂ ಸೊಗಯಿಸುಗುಂ ॥

ಪರೆಣಗಣಯಿಪ (ಶ್ರಾವಕ) ಜನ
.. .. .. .. ಭವನದ ತೀರ್ಥಂ
ಕರನಿವಾಸದೆ ಶೋಬಾ
ಕರ ಯಕ್ಷಯಕ್ಷಿಣೀ ಗೃಹ ಪರಿಕರದ ಜಿನಾಗಮ ॥
ಜ್ವಾಳ್ಲಿನಿ ಸಮಗ್ರಗುಣ ಮಣ
ಮಾಳಿನೀ ಸಾಧಕ ವಿನಯ ಸುಬ್ರತಿ ಜನತಾ
ಪಾಳಿನೀ ದುರಿತಮಳಪ್ರ
ಕ್ಷಳಿನೀ ಸಂವಿದೆಯೆನಿಪ್ಪಳಂತಾ ಪುರದೊಳ ॥

ನೆಗಳ್ದಾ ಕೆಂಚಮನೆಂಬ ಕಳ್ತಲೆಗನತಾ ಜ್ವಾಳಿನೀ ದೇವಿಯಲ್ಲಿ
ಮಿಗೆಯಾರಾದಿಸಲೆಂದೆ ಬಂದೊಸೆಯಿಸಲೆಚ್ಚಿ .. .. .. ಳ್ಗಿಸೆ
ಟ್ಟಗಣವಿಲ್ಲಿ .. .. .. ನಿಂನಂ ಬ (ಲ) ಗೊಂಡೆನಾ
ವಗವೆನಿಷ್ಟಮನೀವುದೆಂದು ಕರುಣಕ್ಕಾನಮ್ರನಾಗಿರ್ಪುದು(ಂ) ॥
(ಮತ್ತೆಭ ವಿಕ್ರೀಡಿತ ವೃತ್ತ:ಛಂದಸ್ಸು ಮೂರನೆಯ ಪಾದದಲ್ಲಿ ಕೆಟ್ಟಿದೆ)

ಇಲ್ಲಿಯ ಬೇಳಗ್ಗೆಲ್ಲಂ

ಬಲ್ಲಿದನಾನ . . .. . .ವನೆನೆಂನಯ ಬಲದಿಂ

ಗೆಲೊಡೆಯನ್ನ . .. .. . ನೀತಿ

.. . . . . . ನಿತ್ತ . . . . ದೇವರಂ ॥

ಆಬರದ ಬಲದಿನಾತ ಮ

ನೋ ಬಲದಿಂದೊಂದೆ ಮೆಯೊಳಣ್ಯನೊಳಿದಿರಾ

ಳಾದಡೆವಗೆ . . . . .ಯನಿಕ್ಕಿದ

ನಿ ಬಲ್ಲಿಂತಾಗ್ಗೆ ಸಲ್ಬುದೆನೆ ಕೆಂಚನೃಪಂ ॥

(ಮೂರನೆಯ ಪಾದದಲ್ಲಿ ದ್ವಿತೀಯಾಕ್ಷರ ಪ್ರಾಸ ತಪಿದೆ)

ಕುಂದದೆ (ಸೋ) ವಾ ನವಿಲಂ

ಕುಂಧೆ (ನವಿಲ) ಸ್ಥಳ (ನವಿನ) ವನೆ ಪೆಸರಾಗಿ ನವಿ

ಲ್ಗುಂದೆವೆಸರಾದುದಾ (ನವಿ)

(ಲ್ಗುಂದ) ಕುಂಡದೆ ಪ್ರಚಣ್ಢ. . . .ವೆನಿಂ ॥

ತ್ರಿಫದಿ ॥ ನವಿಲಕ್ಕಿ ಮಾಡುವನೇಱಿಮಂಡಲ್ಲಿಕ

ನೇಸರ ನೋಂತು ಬೆಳ್ವಲ ನಾಡೆಲ್ಲವ

ನಾಳ್ದಂ ಶೌರ್ಯನಿಧಿ ಕೆಂಚ (ಂ) ॥

ಇನ್ನಿವಗಿದು ಸಂಪದಮಂ

ತನಗಿತ್ತಾ ಜ್ವಾಳಿನೀ ಮಹಾದೆವಿಗೆ ಚೆ

ಯೆನೇಕ ವೃತ್ತಿಗಳನಿತ್ತನಾ ಕೆಂಚಂ ॥

ಮಿಗೆ ಕೆಂಚನ ಕುಲದೊಳು ಬ

ಲ್ಲಿಗ ಹಳ್ಳಿಗ ನಾಗ ಹುಲಿಗ . .. .. (ಕಾ)

ಟಿಗನೆನೆ ಪತಿ ಬಮ್ಮನೆ (ಯೆನೆ)

ನೆಗಳ್ದರ್ಬೆಳ್ವೊಲದೆ ಭೂಪ (ಕ್ಕಕ್ತ್ರಲೆ) ಬಳಿಯುಂ ॥

ಜನ. . . . .. . . .

. .. . .ಬಳಿ ಕಾಏಯಣನಾ ನ ವಿಲ್ಗುಂದದೊಳೊ

ಳಿನ ನಿಧಿಯೆತ್ತಿಸಿದಂ ತ್ರಿಭು

ವನತಿಳಕ ಮೆನಿಪ್ಪ ಪೆಸರ ಜಿನಮಂದಿರಮಂ ॥

ವ॥ ಆತ ನೃಪ . . . . ಗುಣ ಸಂಪೂನಮುಮಾದ ತದು ವಂಶದೊಳ ॥

ಅನುಪಮ ಕೀರ್ತ್ತಿಕತ್ರಲೆಯ ವಂಶ ಶಿರೋಮಣ ರಾಯದೆಷಾ

ಜನಪನಸೂನು ಬೆಳ್ವೊಲದ ಮಂನೆಯರಗ್ರಣ ಬಮಿದೇವನಾತನು

ತನ್ನ ಚತುಸುಮಯಧರ್ಮ್ಮ ಸಮುದ್ದರಣಂ ಪರಾರ್ತ್ಥನೂ

ತನಶಿಬಿಯೆಂಬುದೀ ವಸುಧೆ ಸತ್ಯಗುಣಾಂಬುಧಿ ರಾಯದೇವನಂ ॥

ಸ್ವಸ್ತಿ ಸಮದಿಗತ ಪಂಚಮಹಾಶಬ್ದಂ ಮಹಾಮಣ್ಡಳೇಶ್ವರ ಆಸಂದಿ ಮಯೊರ ಪುರವರಾದೀಶ್ವರ ವಿರೋಧಿಮಣ್ಡಳಿಕನಗ ವಜ್ರದಣ್ಡ ಸುಭಟ ಚೂಡಾಮಣ ವೃರಿಗಜಕೇಸರಿ ಸಹಜ ಮುರಾರಿ ಶ್ರೀಮಜ್ಜಿನ ಗಂದೋದ ಕ ಪವಿತ್ರೀಕೃತೋತ್ತ ಮಾಂಗ ನೇಕಾಂಗ ವೀರ ಪರನಾರೀ ದೂರ ವಿಬುಧಜನಸುತ್ಯ ಬೆಳ್ವೊಲಾದಿತ್ಯ ಜ್ವಾಳಿನೀದೇವೀ ಲಬ್ದವರ ಫ್ರಾಸಾದಾಸಾದಿತ ಕಲಿಗಳಂ ಕಾವ ಮಹಾಮಣ್ಡಳೇಶ್ವರಂ ರಾಯದೇವರ ಸರ ಬೆಳ್ವೂಲನಾಡೊಳಗಣ ಗ್ರಾಮಾನುಗ್ರಾಮಂಗಳ ಶ್ರೀವೀರ

ಬಲಾಳದೇವನ ವೀರ ಪ್ರಧಾನನಾಗಿ ಹಳ್ವುರದ ಕುಪ್ಪದೊಳು ಸುಖದಿನಿರ್ದ್ದು ,. .. .. . . ಶ್ರೀ ಸ್ವಯಂಭು ತ್ರಿಕೊಟೇಶ್ವರ ದೇವ ಸ್ಥಾನಾಚಾರ್ಯ ಶ್ರೀಮತ್ಸಿದ್ಧಾಂತಿ ಚಂದ್ರಭೂಷಣ ಪಂಡಿತ ದೇವ. . . . ಮಹಾನುಭಾವಂ ನಿದಿಗ್ಗೊಂಡು,. . . .ಪಾದಾರ್ಚ್ಚನೆಯಂ ಮಾಡಿ . . . ,.ಧಾರಾ ಪೂರ್ವ್ವಕ ಸರ್ವ್ವಬಾಧಾ ಪರಿಹಾರ. . . . .ಬಿಟ್ಟ .. .. .. ಬಿಟ್ಟ. . . . ದಾನಂ ॥

೪. ಮಹಾಮಂಡಳೇಶ್ವರ ರಾಯದೇವರಸನು ಸಹ ತನ್ನ ಕತ್ತಲೆಕುಲದ ಹಿರಿಯರು ವಂಶಪಾರಂಪರ್ಯವಗಿ ಪಾಲಿಸಿಕೊಂಡು ಬಂದಿದ್ದ ,ಸರ್ವದರ್ಮಗಳಿಗೂ ಸಮಾನ ಗೌರವ ತೋರುವ ಅನೇಕಾಂತ ದೃಷ್ಟಿಯನ್ನು ತಾನೂ ಅನುಸರಿಸಿದನು.

೮.೧. ಕತ್ತಲೆ ಕುಲದ ಕಂಚನೃಪನು ಗಂಗರ –ರಟ್ಟರ ಆಶ್ರಯದಲ್ಲಿ ಬಾಳುದವನು. ಕೆಂಚರಸನ ದೇವತೆಯನ್ನು ಆರಾದೀಸಿ ವರವನ್ನು ಪಡೆದು ಯಶೋವಂತ ನಾದನು:ಪದಾವತೀ ದೇವಿಗೊಂದು ವರದಿಂದ ಪೊಂಬುಚ್ಚಪುರವರಾದೀಶನಾದ ಜಿನದತ್ತರಾಯನು ಆದೇವಿಗೊಂದು ಬಸದಿಯನ್ನು ಮಾಡಿಸಿದನು. ಅದರಂತೆ ಕೆಂಚರಸನೂ ಜ್ವಾಳ ಮಾಳಿನೀ ದೇವಿಗೆ ನವಿಲ್ಗುಂದದಲ್ಲಿ ಒಂದು ಬಸದಿಯನ್ನು ಕಟ್ಟಿಸಿದನು .

ಕೆಂಚನೃಪನ ತರುವಾಯ ಎಂಟು ತಲ್ಪೆಮಾರಿನ ಹೆಸರುಗಳು ಈಶಾಸನದಲ್ಲಿ ಬಂದಿವೆ.ಅವರಲ್ಲಿ ಕಾಟರಸನು ನವಿಲ್ಗುಂದದಲ್ಲಿ 'ತ್ರಿಭುವನ ತಿಳಕ ' ವೆಂಬ ಇನೊಂದು ಜಿನ ಮಂದಿರವನ್ನು ಮಾಡಿಸಿದನು: ಇದು ಬಹುಶ: ಚಂದ್ರ ಪ್ರಭ ತೀರ್ಥಂಕರ ದೇವಾಲಯವಗಿರಬೇಕು.

೫. ಕತ್ತಲೆಕುಲದ ಮಾಂಡಲಿಕ–ಸಾಮಂತರ ವಂಶಾವಳಿಯನ್ನು ಉಪಲಬ್ದ ಶಾಸನಗಳಲ್ಲಿ ದಿರೆಯುವ ಮಾಹಿತಿಗಳನ್ನು ಅವಲಂಬಿಸಿ ಗುರುತಿಬಸಹುದು;

(ಕಟ್ಟ್ತಲೆ –ಕತ್ತಲೆ ) ಕತ್ತಲೆ ಕುಲ ವಂಶ ವೃಕ್ಷ

ರೇವನ್ತ ,ಸು ೫೨೫

।

ಕೆಂಚ I .ಸು. ೮೫೦

।

ಸಿರಿಮುದ್ದ. ಸು. .೮೭೫

।

ಪಿರಿಯ ಕೋಪಿ ಗಾವುಂಡ ಸು. ೯೦೦

।

ಪಿರಿಯ ಆಯ್ಚ , ಸು, ೯೨೫

।

ತೊಣ್ಡ. ಸು. ೯೫೦

।

ಕಾಳಿಧುರಂಧರ. ೯೮೦

।

ಕೆಂಚನೃಪ II .ಸು . ೯೯೫

।

ಬಲ್ಲಿಗ

।

ಹಳಿಗ

।

ನಾಗ

।

ಹುಲಿಗ

।

ಕಾಟಿಗ –ಕಾಟರಸ .೧೦೭೧–೭೨

।

ಬಮ್ಮ‌|

।

ರಾಯದೇವ

।

ಬಮ್ಮಿದೇವ ॥ (ಹೆಂ,. ಬಾಗಲದೇವಿ)

।

ರಾಯದೇವ ॥

ಶಾಸನಗಳಲ್ಲಿರುವ ಈ ವಿಂಶದ ವಿವರಗಳನ್ನು ಪರಾಮರ್ಶಿಸಿದ ಮೇಲೆ ತಲಪಬಹುದಾದ ಹಾಗೂ ಕೈಗೂಳ್ಬಹುದಾದು ಕೆಲವು ತೀಮಾನಗಳು;

೧. ಕಟ್ಲೆ (ಕುಲ) .ಕತ್ತಲೆ(ಕುಲ) ,ಕತ್ತಲೆ (ಕುಲ) ಎಂಬ ಮೂರು ರೂಪಗಳೊಂದಿಗೆ ಮೂರು ಹಂತಗಳಲ್ಲಿ ಈ ಕುಲದ ಹೆಸರು ಮಾರ್ಪಾಟು ಹೊಂದಿದೆ. ಈ ಶಬ್ದರೂಪದ ಬೆಳೆವಣಗಯಲ್ಲಿ ವಿಜಾತೀಯ ಸಂಯುಕ್ತಾಕ್ಷರಗಳು ಸಜಾತೀಯವಾಗಿ ಸ್ವನಪರಿರ್ತನೆ ಪಡಿದಿವೆ.

೨. ಈ ಕತ್ತಲೆವಂಶದವರು ಮಹಾ ಸಾಮಂತ ಪದುವಿಗೆ ಏರಿದ್ದರು. ಸಾಮಾಜಿಕವಾಗಿ ಪ್ರತಿಷಿತರಾಗಿದ್ದರು. ಕಾಟರಸ (ಕೋಟಿಗ– ಕಾಟಿಗ) ನು ಬೆಳ್ವಲಾಧಿಪತಿ ಮಹಾಸಾಮಂತನಾಗಿ ಪ್ರಸಿದ್ದನಾಗಿದ್ದರು.

೩. ಕತ್ತಲೆ ಕುಲದವರು ಯುದ್ದವೀರರು. ಈವಂಶದ ಕೆಲವರು ರಣ ಸಾಹಸಿಗಳ್ಳಗಿ ಖ್ಯಾತನಾಮರಾಗಿದ್ದರು.

೪. ˇತಮ್ಮ ಸಾಹಸದಿಂದ ಮೊದಲು ಇವರು ಬೆಳ್ವಲವನ್ನು ಪಡೆದರು, ಬಳಿಕ ಇವರ ನೆಲೆಯ 'ನೆವಿಲ್ಗುಂದಪುರ'ವಾಯಿತು. ಕಾಳಿಧುರ ದುರನು ಬೆಳ್ವಲಾದಿತ್ಯ ದೇವನೆನಿಸಿದ್ದರೆ ,ಕಾಟರಸನು ಬೆಳ್ವಲಾದಿಪತಿಯೆನಿಸಿದ್ದನು.

೫. ರೇವಂತ ,ಕಂಚ, ಸಿರಿಮುದ್ಧ ,ಪಿರಿಯಕೋಟಿಗಾವುಣ್ಡ. ಪಿರಿಯಾಅಯ್ಚ, ತೊಣ್ಡ, ಕಾಳಿಧುರಧರ– ಇವರು ಕ್ರಮವಾಗಿ ಈಮನೆತನಕ್ಕೆ ಹೆಸರು ತಂದ ಮೂದಲಿಗರು, ಅನಂತರ ಎರಡನೆಯ ಹಂತದಲ್ಲಿ ಕೆಂಚನೃಪ ಬಲ್ಲಿಗೆ ,ಹಳಿಗ, ನಾಗ, ಹುಲಿಗ, ಕೋಟಿಗ (ಕಾಟರಸ , ಕಾಯಂಕಕಾಱು). ಬಮ್ಮ, ರಾಯದೇವ॥ ,ಬಮಿದೇವ ॥ (ಹೆಂ ಬಾಗಲದೆವಿ ,) ಹಾಗೂ ರಾಯದೇವೆ ॥ (ಹೆಂ .ಬಾಗಲದೆವಿ), ಹಾಗೂ ರಾಯದೇವ ॥ –ಇವರು ಪ್ರಖ್ಯಾತರಾದರು.

೬. ಕತ್ತಲೆಕುಲದವರು ಕ್ರಿ .ಶ. ಸು. ೮೨೫ ರಿಂದ ೧೨೦೦ರ ವರೆಗೆ ೩೭೫ ವರ್ಷಕಾಲ ಆಳಿದ – ಬಾಳಿದ ವಿವರಗಳು ಶಾಸನೋಕ್ತವಾಗಿದೆ.

೭. ಕತ್ತಲೆಕುಲದವರು ಮೊದಲಿ ರಾಷ್ಟಕೂಟರಲ್ಲಿ ಸಾಮಂತರಾಗಿದ್ದರು, ಅನಂತರ ತೈಲಪನು ಚಾಳುಕ್ಯ ಸಮ್ರಾಜ್ಯ ಸ್ಥಾಪಿಸುತ್ತಿದ್ದಂತೆಯೇ ತಮ್ಮ ರಾಜ ನಿಷೆಯನ್ನು ಚಾಳುಕ್ಯರಿಗೆ ತೋರಿಸಿದರು. ಸು. ೧೫೦ ವರ್ಷ ರಾಷ್ಟಕೂಟರಾಧೀನರಾಗಿ, ಸು. ೨೦೦ ವರ್ಷ ಚಾಳುಕ್ಯರ ಮಾಂಡಲ್ಲಿಕರಾಗಿ ,ಸಾಮಂತರಾಗಿ ಕತ್ತಲೆ ಕುಲ ಆಡಳಿತ ನಡಸಿತು. ಆಮೇಲೆ ಹೊಯ್ಸಳರ ಸಾಮಂತರಾಗಿಕೆಲವು ಕಾಲ ಅಧಿಕಾರದಲ್ಲಿದ್ದರು.

೮. ಕತ್ತಲೆ ಕುಲದವರು ಪ್ರಧಾನವಾಗಿ ಜೈನಧರ್ಮಿಯರು. ಜಿನಧರ್ಮ ನಿರ್ಮಳರು.

೯. ರಕಲ ಸಮಯಿಗಂ ಬುಧಜನಕಂ ದೀನ ವೃದ್ದ ದ್ವಿಜರಿಗೂ ನಟಭಟರಿಗೂ ಆಸರೆಯಾಗಿದ್ದವರು ಈ ಕತ್ತಲೆ ಕುಲದವರು.ಇದು ಅವರೆ ಉನತ ಇದಾರ ಚರಿತೆಯನೂ ಧರ್ಮಸಷ್ಣತೆಯನೂ ತೋರಿಸುತ್ತದೆ. ಜೈನ ಬಸದಿಗಳನ್ನು ಮಾಡಿಸಿದಂತೆ ಶಿವಾಲಯವ ನ್ನೂಮಡಿಸಿದರು.

೧೦. ಕತ್ತಲೆ ಕುಲದವರ ಮುಖ್ಯಮನೆದೇವರು ಜಿನಶಾಸನದೇವಿಯಾದ ಜ್ವಾಲಿಮಾಲ್ಲಿನೀ ಯಕ್ಷಿ[ನಾಗರಾಜಯ್ಯ ,ಹಂಪ; ಯಕ್ಷಯಕ್ಷಿಯರು: ೧೯೭೬: ೧೨೩-೨೪] ಶೌರ್ಯನೀಧಿ ಕೆಂಚಮನು ಜ್ವಾಳಿನೀಮಹಾದೇವಿಗೆ ಒಂದು ದೇವಾಲಯವನೂಮಾಡಿಸಿದನು.

೧೧. ಕತ್ತಲೆ ಕುಲದವರು ಧಾರವಾಡಜಿಲೆಯ ನವಿಲಗುಂದವನ್ನು ನೆಲೆವೀಡು ಮಾಡಿಕೊಡಿದ್ದರು. ಕಾಟರಸನು ನವಿಲ್ಗುಂದದಲ್ಲಿ 'ತ್ರಿಭುವನ ತಿಳಕಮೆನಿಪ್ಪ ಪೆಸರ ಜಿನಮಂದಿರಮಂ ಮಾಡಿಸಿದನು: ಅಲ್ಲದೆ ಈತನು ಅಣ್ಣಿಗೆಱೆಯ ಗಂಗಪೆರ್ಮಾಡಿ ಬಸ್ದದಿಗೆ ೫೦ ಮತ್ತರು ಭೂದಾನ ಮಾಡಿದನು.

೧೨. 'ನವಿಲ್ಗುಂದ ಎಂಬ ಕನ್ನಡ ಸ್ಥಳನಾಮವನ್ನು ಸಂಸ್ಕೃತೀಕರಣಗೊಳಿಸಿ 'ಮಯೂರ ಪುರ'ಎಂದು ಕರೆಯಲಾಗಿದೆ. ಕತ್ತಲೆಕುಲದ ಸಮಂತ –ಮಾಂಡಲಿಕರನ್ನು 'ಮಯೂರಪುರ ವರಾದೀಶ್ವರ' ರೆಂದುಗುರುತಿಸಲಾಗಿದೆ .[ನಾಗರಾಜಯ್ಯ,ಹಂಪ ;ಶಾಸನಗಳಲ್ಲಿ ಜ್ವಾಲಾಮಾಲಿನಿ ಮಹಿಮೆ –'ಸಮಂತಭದ್ರ' (ಸಂ) ಜಯಚಂದ್ರ ಎಂ. ಎ. ಜ್ವಾತೇದ್ರಕುಮಾರ, ಎಸ್,,೧೯೯೪ :೨೩–೨೭]

೧೩. ಶ್ರವಣಬೆಳೆಗೊಳದ ಚಿಕ್ಕ ಬೆಟ್ಟದ ಮೇಲೊಂದು ಬಸದಿಯನ್ನು ಈ ಕತ್ತಲೆ ಕುಲದವರು ಕಟ್ಟಿಸಿದಂತೆ ತೋರುತ್ತದೆ [ನಾಗರಾಜಯ್ಯ ಹಂಪ: ಸಂಶೋದನ ವ್ಯಾಸಂಗ ,(ಸಂ) ಸಂಗಮೇಶ ಸವದತ್ತಿ ಮಠ, ೧೯೯೪]

೧೪. ಕರ್ನಾಟಕದ ಚರಿತ್ರೆಯಲ್ಲಿ ಆಗಿ ಹೋದ ಸಣ್ಣಪುಟ್ಟ ಅರಸುಕುಲಗಳಲ್ಲಿ 'ಕತ್ತಲೆ ಕುಲ' ಕ್ಕೊ ವಿಶಿಷ್ಟವಾದ ಸ್ಥಾನವಿದೆ .

೧೫. ಕತ್ತಲೆ ಕುಲಕೂ ,ಮೋರಕಕುಲ (ಮೊರಕುಲ ,ರಣಮೂರ್ಖ ಕುಲ )ಕ್ಕೂ ವಾಂಶಿಕ ಸಂಬಂಧವಿರುವಂತೆ ಕಾಣುತ್ತದೆ.

೧೬. ಕತ್ತಲೆ ಕುಲದವರು ರಾಷ್ಟ್ರಕೂಟಸಾಮ್ರಾಟರ ಅದೀನದಾಲ್ಲಿ ಇದ್ದಾಗ ಗಂಗರ ಸಂಬಂಧ ಸೇಹವನ್ನು ಪಡೆದಿದ್ದರು :ಪ್ರಾಯ: ಸಗರ ಮಣಲೆಯರ ನೆಂಟಸ್ತಿಕೆಯೂ ಇದ್ದಿರ ಬೇಕು.

೧೭. ಕತ್ತಲೆ ಕುಲವನ್ನು ಕುರಿತು ಇನ್ನಷು ವ್ಯಾಪಕ ಹಾಗೂ ತೌಲನಿಕ ಅಧ್ಯಯನಕ್ಕೆ ಈ ಸಂಪ್ರಬಂಧ ಹೆಭ್ಬಾಗಿಲು ತೆರೆದಿದೆ.